UKDPUCPA

# ದ್ವಿತೀಯ ಪಿ.ಯು.ಸಿ. ಪೂರ್ವಸಿದ್ಧತಾ ಪರೀಕ್ಷೆ 2023

ಅವಧಿ 3 ಗಂಟೆ 15 ನಿಮಿಷಗಳು | ಕನ್ನಡ (01) | ಗರಿಷ್ಠ ಅಂಕಗಳು : 100

## ಅ) ಬಹು ಆಯ್ಕೆ ಪ್ರಶ್ನೆ ವಿಭಾಗ

I. ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. 10 X 1=10

1. ಸೀತೆಯನ್ನು ರಾವಣನು ಎಲ್ಲಿ ಇರಿಸಿದ್ದನು?
   ಅ) ಅಶೋಕವನ ಆ) ಪ್ರಮದವನ ಇ) ಉದ್ಯಾನವನ ಈ) ನಾಗವನ
2. ಬಸವಣ್ಣನವರ ವಚನಗಳ ಅಂಕಿತ ಯಾವುದು?
   ಅ) ಚೆನ್ನಮಲ್ಲಿಕಾರ್ಜುನ ಆ) ಗುಹೇಶ್ವರ ಇ) ಕೂಡಲ ಸಂಗಮದೇವ ಈ) ಕಾಣಾ ರಾಮನಾಥ
3. ಧರ್ಮರಾಯನಿಗೆ ಎಂಥ ಗರ ಹೊಡೆದಿದೆ?
   ಅ) ಅಧಿಕಾರ ಆ) ಅಹಂಕಾರ ಇ) ಧರ್ಮಕ್ಷಮೆ ಈ) ಧರ್ಮಕರ್ಮ
4. ಕೆಂಪು ಪಟ್ಟಿಗೆ ಸೇರಿದ ಪ್ರಾಣಿ ಯಾವುದು?
   ಅ) ಕಪ್ಪು ಬಾಲದ ಕೋತಿ ಆ) ಕೆಂಪು ಬಾಲದ ಕೋತಿ ಇ) ಬಿಳಿ ಬಾಲದ ಕೋತಿ ಈ) ಸಿಂಹ ಬಾಲದ ಕೋತಿ
5. ನಮ್ಮ ದೇಶದಲ್ಲಿ ವಿರಳವಾಗಿ ಹೋದ ಧರ್ಮ ಯಾವುದು?
   ಅ) ಹಿಂದೂ ಆ) ಕ್ರಿಶ್ಚಿಯನ್ ಇ) ಬೌದ್ಧ ಈ) ಜೈನ
6. ಧಣಿಗಳ ಹೆಸರೇನು?
   ಅ) ವೆಂಕಪ್ಪಯ್ಯ ಆ) ಹೊನ್ನಪ್ಪಯ್ಯ ಇ) ಬೀರಪ್ಪಯ್ಯ ಈ) ಸಂಕಪ್ಪಯ್ಯ
7. ಭೂಮಿಯ ಮೇಲಿನ ಮೊದಲ ವಿಜ್ಞಾನಿ ಯಾರು?
   ಅ) ಮನುಷ್ಯ ಆ) ಮಗು ಇ) ತಾಯಿ ಈ) ತಂದೆ
8. ದುರ್ಗಪ್ಪ ಏನನ್ನು ಕೇಳಿ ಪಡೆಯಲು ಬಂದಿದ್ದನು?
   ಅ) ಕತ್ತಿ ಆ) ಕೊಡಲಿ ಇ) ಸುತ್ತಿಗೆ ಈ) ಪರಶು
9. ಆನೆ ಇಲ್ಲದ್ದರಿಂದ ವೇಲಾಯುಧ ಎಲ್ಲಿ ಕೆಲಸಕ್ಕೆ ಸೇರಿದ?
   ಅ) ರೈಸ್ ಮಿಲ್ ಆ) ಸಾಮಿಲ್ ಇ) ಫಾರೆಸ್ಟ್ ಇಲಾಖೆ ಈ) ವಿದ್ಯುತ್ ಇಲಾಖೆ
10. ಯಾವ ವಿಷಯ ಪ್ರಸ್ತಾಪಿಸಲು ಲೇಖಕರು ಮೀಟಿಂಗಿಗೆ ಹೋಗಿದ್ದರು?
    ಅ) ಆನೆ ಆ) ಕಂತ್ರಿ ನಾಯಿ ಇ) ಕಾಡಾನೆ ಈ) ಸೀಳುನಾಯಿ

ಆ) 11. ಹೊಂದಿಸಿ ಬರೆಯಿರಿ. 5 X 1=5

| | |
|---|---|
| ಅ) ಜಿ.ಎಸ್.ಶಿವರುದ್ರಪ್ಪ | 1. ಹಕ್ಕಿ ಚಿತ್ರ ಮತ್ತು... |
| ಆ) ಎಚ್. ನಾಗವೇಣಿ | 2. ಧಣಿಗಳ ಬೆಳ್ಳಿಲೋಟ |
| ಇ) ವೀರೇಂದ್ರ ಸಿಂಪಿ | 3. ಮುಂಬೈ ಜಾತಕ |
| ಈ) ನೇಮಿ ಚಂದ್ರ | 4. ಆಯ್ಕೆಯಿದೆ ನಿಮ್ಮ ಕೈಯಲ್ಲಿ |
| ಉ) ಟಿ.ಯಲ್ಲಪ್ಪ | 5. ಮುಟ್ಟಿಸಿಕೊಂಡವನು. |

ಇ) 12. ಬಿಟ್ಟ ಸ್ಥಳಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 5 X 1=5

(ಪ್ರಥಮ, ನಿಜಾಶರ್ಮ, ಪೊಣಚ್ಚಿ, ಡಾ॥ ತಿಮ್ಮಪ್ಪ, ಕುದ್ದ)

ಕ) ವೈದ್ಯಲೋಕ ಕಂಡ ಅತ್ಯಂತ ಪ್ರಾಮಾಣಿಕ ಡಾಕ್ಟರ್________

ಖ) ಮಾರ್ಗಗೆ ಪರಿಚಯವಾದ ಆದಿವಾಸಿ________

ಗ) ನನಗೆ ದುರಾಸೆಯ ಹುಡುಗನನ್ನು ನಿರಾಕರಿಸುವ ಆಯ್ಕೆ ಇದೆ ಎಂದವಳು ______

ಘ) ಕರ್ನಾಟಕದಲ್ಲಿ ಕನ್ನಡವೇ________

ಙ) ಬೆಳ್ಳಿಲೋಟ________ರಥಬೀದಿಯಲ್ಲಿರುವ ನರಸಿಂಹಾಚಾರಿಯಲ್ಲಿ ಮಾಡಿಸಿದ್ದು.

II. ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 4 X 2=8

13. ಹೆಂಡತಿಯ ಪರಿಚಯಕ್ಕಾಗಿ ಗಂಡು ಗೂಬೆ ಏನು ಮಾಡುತ್ತಾನೆ?
14. ರಾಜ ಮತ್ತು ಮಂತ್ರಿಗಳಿಗೆ ಯಾವ ಅರ್ಹತೆಗಳಿರಬೇಕೆಂದು ಸೋಮನಾಥನು ಹೇಳಿದ್ದಾನೆ?
15. ಮಗು ಏನೇನು ಕಲಿಯಿತು?
16. ಮೊಮ್ಮಗಳ ಆತುರಕ್ಕೆ ಮುದುಕಿ ಏನೆಂದುಕೊಂಡಳು?
17. ದನಗಳಿಗೆ ಜನಗಳಿಗೆ ಏನೇನು ಇಲ್ಲ?

ಆ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 3 X 2=6

18. ಕೊನೆಯಲ್ಲಿ ಬಸಲಿಂಗನಿಗೆ ಏನೆಂದು ನಿಶ್ಚಿತವಾಗ ತೊಡಗಿತ್ತು?
19. ಕೈಗಾರಿಕೋದ್ಯಮಗಳಿಂದ ಕಾಡು ನಾಶವಾದುದು ಹೇಗೆ?
20. ಕಥೆಯನ್ನು ಯಾವ ರಸಗಳಲ್ಲಿ ಹೇಳಲೆಂದು ಮುದ್ದಣ ಕೇಳಿದನು?
21. ರೋಗಿಗಳ ಪಥ್ಯ ಮಾಡುವವರ ಜಿದ್ದು ಎಂತಹದು?

ಇ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. 4 X 2=8

22. ಮರದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?
23. ಕಾಡಾನೆಗಳ ಹಾವಳಿಗೆ ಪ್ರಭಾತ ನೀಡಿದ ಕಾರಣಗಳೇನು?
24. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
25. ನಾಯಿ ಕಚ್ಚಿದ್ದಲ್ಲಿ ಎಂದಾಗ ಡಾಕ್ಟರ ಇರುಸು ಮುರುಸಿನಿಂದ ಏನು ಹೇಳಿದನು?
26. ಆನೆಯನ್ನು ಹದ್ದುಬಸ್ತಿನಲ್ಲಿಡುವುದರ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ ವಿಭಾಗ

III. ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. 2 X 3=6

27. ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ
28. ನೀನಲ್ಲದುಳಿದವರುಚಿತ ದಾಹೀರರು.

29. ಮುಳುಗಿರಲಿ ಮುಷ್ಟು ಚಿಂತನದಿ

ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1 X 3=3**

30. ಕನ್ನಡಿಗರು ಮೊದಲು ಕನ್ನಡಿಗರಾಗಿರಬೇಕು

31. ನೀನು ಯಾವ ಸ್ಕೂಲಿನಲ್ಲಿ ಓದುತ್ತಿಯೆ?

ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **1 X 3=3**

32. ಕುದಾಲಿಗಿಂತ ಸೊಂಡಿಲು ಬೀಸಿದರೆ ಸಾಕಲ್ಲ

33. ಆನೆ ಬೇಲಿ ದಾಟಿ ಹೋಯ್ತು ಸರ್.

ಈ-ವಿಭಾಗ

**IV.ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ** **2 X 4=8**

34. ರಕ್ಷಕರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಹೇಗೆ ಚಿತ್ರಿಸಿದ್ದಾರೆ?

35. ಭೀಮನು ದ್ರೌಪದಿಯನ್ನು ಹೇಗೆ ಸಂತೈಸಿದನು?

36. ನಿರ್ಮಲ ಚಿತ್ತದ ಅಗತ್ಯವನ್ನು ಸೋಮನಾಥ ಹೇಗೆ ನಿರೂಪಿಸಿದ್ದಾನೆ?

37. ಗರತಿ ತವರಿಗೆ ಏನೆಂದು ಹರಸುತ್ತಾಳೆ?

ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ **1 X 4=4**

38. ಬಸಲಿಂಗ ದಾ॥ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೇ ಇರಲು ಕಾರಣವೇನು?

39. ರಜೆಗೆಂದು ಮೈಸೂರಿಗೆ ಹೋದಾಗ ಲೇಖಕಿಯ ಪತಿಗೆ ಆದ ತೊಂದರೆಯೇನು?

40. ಧಣಿ ಮತ್ತು ತೋಳದ ನಡುವಿನ ಸಮರವನ್ನು ಚಿತ್ರಿಸಿ.

ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ **1 X 4=4**

41. ನಿರೂಪಕರು ಕೂಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ

42. ಮೋಸಮನ್ ಪಿಪ್ಪಾರನ ಬವಣೆಗಳನ್ನು ನಿರೂಪಕರು ಹೇಗೆ ವಿವರಿಸಿದ್ದಾರೆ?

43. ನಾಗರಾಜನ ನಿಗೂಢ ಸಾವಿನ ಬಗ್ಗೆ ಜನರ ಅಭಿಪ್ರಾಯವೇನು?

ಉ-ವಿಭಾಗ

**V. ಅ) ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ.** **1 X 5=5**

44. ಕರುಣಿಸುವೊಡೆನಗೆ ವರಕಂ
ಧರ ಧುರದೊಳ್ ರಘು ತನುಜನಾಯುಃಪ್ರಾಣಂ
ಬರೆಗಂ ಬಾರದಿರೇನುತುಂ
ಧರಿತ್ರಿಯೊಳ್ ಮೈಯನೊಕ್ಕು ಮೂರ್ಛೆಗೆ ಸಂದಳ್

ಅಥವಾ

ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ
ಕೇಕು, ಚಳಿ, ನಕ್ಷತ್ರ ದೀಪ;
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ;
ಆದಕ್ಕೆ ಮಂಜಿನ ಕೆಲಸ ಮಾಡಿದ ಹತ್ತಿ
ಸ್ಫಟಿಕದ ಹುಡುಗಿಯ ಮೊಗಕಾಲಲ್ಲಿ
ಬೆಚ್ಚಗಾಗಿದೆ ಮೊಂಬತ್ತಿ

**VI. ಅ) ಕೆಳಗಿನ ಪ್ರಶ್ನೆಗಳಿಗೆ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **6 X 2=12**

45. ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ.
ಕರ, ಹೊರೆ, ಕಳೆ

46. ಕೆಳಗಿನ ಎರಡು ಪದಗಳಿಗೆ ತದ್ಭವ ರೂಪ ಬರೆಯಿರಿ.
ಭಿಕ್ಷಾ, ದಯಾ, ಕ್ಷಮಾ

47. ಕೆಳಗಿನ ಎರಡು ಪದಗಳಿಗೆ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ.
ಬೆನ್ನು ಬಾರಿಸು, ಟೋಪಿ ಹಾಕು, ಎರಡು ಬಗೆ

48. ಕೆಳಗಿನ ಎರಡು ಪದಗಳಿಗೆ ಕಾಲ ಸೂಚಕಗಳನ್ನು ಬರೆಯಿರಿ.
ಬರುವನು, ಹೋದನು, ಬರುತ್ತಾನೆ

49. ಕೆಳಗಿನ ಎರಡು ಪದಗಳಿಗೆ ಗುಣವಾಚಕಗಳನ್ನು ಬರೆಯಿರಿ.
ವಕ್ರದಂತ, ದೊಡ್ಡ ವಾರ್ತೆ, ಮರಿಗುಣಿ

50. ಕೆಳಗಿನ ಎರಡು ಪದಗಳ ವಿಭಕ್ತಿಯನ್ನು ಹೆಸರಿಸಿ.
ಮನೆಗೆ, ಕಟ್ಟಿಗೆಯ, ಮಂತ್ರಿಯಾಗಿ

51. ಕೆಳಗಿನ ಎರಡು ಪದಗಳಿಗೆ ನಿಷೇಧಾರ್ಥಕ ರೂಪಗಳನ್ನು ಬರೆಯಿರಿ.
ಬರುವವು, ಬಂದಿತು, ತಿಂದನು

ಆ) ಯಾವುದಾದರೂ ಒಂದನ್ನು ಕುರಿತು ಪ್ರಬಂಧವನ್ನು ಬರೆಯಿರಿ **1X5=5**

52 ಹೆಚ್ಚುತ್ತಿರುವ ವೃದ್ಧಾಶ್ರಮಗಳು ಅಥವಾ
ಕೃಷಿಯ ಮೇಲೆ ಜಾಗತೀಕರಣದ ಪ್ರಭಾವ

ಇ) ಪತ್ರಲೇಖನ :- ಯಾವುದಾದರೂ ಒಂದನ್ನು ಕುರಿತು ಪತ್ರ ಬರೆಯಿರಿ **1 X 4=4**

53. ವರ್ಗಾವಣೆ ಪತ್ರಕ್ಕಾಗಿ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆಯಿರಿ. ಅಥವಾ
ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಬರಲು ತಂದೆಗೆ ಒಂದು ಪತ್ರ ಬರೆಯಿರಿ.

ಈ) ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ **1 X 4=4**

54 [illegible] ಅಥವಾ
ಬೆಳೆಯುವ ಸಿರಿ ಮೊಳಕೆಯಲ್ಲಿ